ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ ಪಿ ನಂಜುಂಡಿ ವಿಶ್ವಕರ್ಮ ರವರು ರಾಜ್ಯದ ಮುಜರಾಯಿ ದೇವಾಲಯಗಳ ಆಡಳಿತ ಮಂಡಳಿಗಳಲ್ಲಿ ವಿಶ್ವಕರ್ಮ ಸಮಾಜದ ಉಪಪಂಗಡದವರಿಗೆ ಅಥವಾ ವೈದಿಕಪರಂಪರೆಯನ್ನು ಹೊಂದಿರತಕ್ಕಂಥ ವಿಶ್ವ ಬ್ರಾಹ್ಮಣರಿಗೂ ಅವಕಾಶ ನೀಡುವ ಕುರಿತು ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರ ಹೇಳಿಕೆ:-

**ಉತ್ತರ :-**

ರಾಜ್ಯದಲ್ಲಿರುವ ಒಂದು ಅಥವಾ ಹೆಚ್ಚು ಅಧಿಸೂಚಿತ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಅಧಿಸೂಚಿತ ಸಂಸ್ಥೆಗಳ ಒಟ್ಟು ವಾರ್ಷಿಕ ಆದಾಯವು ರೂ.25.00ಲಕ್ಷಗಳನ್ನು ಮೀರಿದ್ದಲ್ಲಿ ರಾಜ್ಯ ಧಾರ್ಮಿಕ ಪರಿಷತ್ತು, ಮತ್ತು ವಾರ್ಷಿಕ ಆದಾಯವು ರೂ.25.00ಲಕ್ಷಗಳ ರೂಪಾಯಿಗಳನ್ನು ಮೀರದಿದ್ದಲ್ಲಿ ಜಿಲ್ಲಾ ಧಾರ್ಮಿಕ ಪರಿಷತ್ತು 09 ಜನ ಸದಸ್ಯರನ್ನು ಮೀರದ ಒಂದು ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಲಂ 25ರ ಅಡಿಯಲ್ಲಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಸದರಿ ವ್ಯವಸ್ಥಾಪನಾ ಸಮಿತಿಗೆ ಈ ಕೆಳಗಿನವರನ್ನು ಸದಸ್ಯರನ್ನಾಗಿ ನೇಮಕಗೊಳಿಸಬೇಕಾಗಿರುತ್ತದೆ.

(i) ಒಂದು ದೇವಾಲಯದ ಸಂಬಂಧದಲ್ಲಿ ಪ್ರಧಾನ ಅರ್ಚಕ ಅಥವಾ ಅರ್ಚಕ
(ii) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದವರ ಪೈಕಿಯಿಂದ ಕೊನೆಪಕ್ಷ-ಒಬ್ಬರು
(iii) ಇಬ್ಬರು ಮಹಿಳೆಯರು
(iv) ಸಂಸ್ಥೆಯು ಇರುವ ಸ್ಥಳದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳ ಪೈಕಿಯಿಂದ ಕೊನೇ ಪಕ್ಷ-ಒಬ್ಬರು- ಸದಸ್ಯರುಗಳನ್ನು ಹೊಂದಿರತಕ್ಕದ್ದು.
(v) ಸಾಮಾನ್ಯ ವರ್ಗಕ್ಕೆ ಸೇರಿದ ಇತರ ನಾಲ್ಕು ಸದಸ್ಯರುಗಳನ್ನು ಹೊಂದಿರತಕ್ಕದ್ದು.

ಅಧಿಸೂಚಿತ ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿಯನ್ನು ಮೇಲಿನಂತೆ ಸಂದರ್ಭಾನುಸಾರ ರಾಜ್ಯ ಧಾರ್ಮಿಕ ಅಥವಾ ಜಿಲ್ಲಾ ಧಾರ್ಮಿಕ ಪರಿಷತ್ ವತಿಯಿಂದ ಕಾಯ್ದೆಯ ಸೆಕ್ಷನ್ 25 ಅಡಿಯಲ್ಲಿ ನೇಮಕ ಮಾಡಲಾಗುತ್ತಿದೆ. ವ್ಯವಸ್ಥಾಪನಾ ಸಮಿತಿಗೆ ಮೇಲ್ಕಂಡಂತೆ ನಿಗದಿಪಡಿಸಿರುವ ಮೀಸಲಾತಿಯನ್ವಯ ನೇಮಕ ಮಾಡಬೇಕಾಗಿದ್ದು, ವ್ಯವಸ್ಥಾಪನಾ ಸಮಿತಿಯಲ್ಲಿ ನಿರ್ದಿಷ್ಟವಾಗಿ ವಿಶ್ವಕರ್ಮ ಸಮಾಜದ ಉಪಪಂಗಡದವರಿಗೆ ಅಥವಾ ವೈದಿಕ ಪರಂಪರೆಯನ್ನು ಹೊಂದಿರತಕ್ಕಂಥ ವಿಶ್ವ ಬ್ರಾಹ್ಮಣರಿಗೆ ಅಥವಾ ಇತರ ನಿರ್ದಿಷ್ಟ ಸಮುದಾಯವರಿಗೆ ನೇರವಾಗಿ ವ್ಯವಸ್ಥಾಪನಾ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲು ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ.

**ಸಂಖ್ಯೆ: ಕಂಇ 214 ಮುಸಪ್ರ 2022**

(ಶಶಿಕಲಾ.ಅ.ಜೊಲ್ಲೆ)
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು

Scanned with CamScanner